**ದಿನಾಂಕಃ 01-02-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 4 ಎ ದಿಂದ ಎಫ್ ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಎ.ಕೆ. ವಕೀಲರಿಂದಃ**

ನಾನು ಚಳಗೇರಿ ಗ್ರಾಮ ಪಂಚಾಯಿತಿಯಲ್ಲಿ 6 ವರ್ಷ ಕಾರ್ಯದರ್ಶಿಯಾಗಿ ಸೇವೆ ಮಾಡಿರುತ್ತೇನೆ. ಇವಾಗ ನಾನು ಕರೂರು ಗ್ರಾಮದಲ್ಲಿ ವಾಸವಾಗಿರುತ್ತೇನೆ. ಈ ಕೇಸಿನ ಪ್ರತಿವಾದಿಗಳಿಗೂ ನಮಗೂ ಸಂಬಂದ ಇದೆಯಾ ಎಂದರೆ ಇಲ್ಲ. ನಾನು ಚಳಗೇರಿ ಗ್ರಾಮ ಪಂಚಾಯಿತಿಯಲ್ಲಿ 6 ವರ್ಷಗಳ ಕಾಲ ಬಿಲ್ ಕಲೆಕ್ಟರ್ ಆಗಿದ್ದೇನು. ಆಗ 1987 ರಿಂದ 1993 ಇಸವಿಯವರೆಗೆ ಮಾಡಿರುತ್ತೇನೆ. ನಾನು ಚಳಗೇರಿ ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಿದ್ದ ಅವಧಿಯಲ್ಲಿ ನನ್ನ ಕಚೇರಿಯ ಕೆಲಸವನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ವಹಿವಾಟು ಇರುವುದಿಲ್ಲ ಎಂದರೆ ಸರಿ. ಚಳಗೇರಿಯಲ್ಲಿ ನನಗೆ ಯಾವುದೇ ಮನೆ, ಜಮೀನು ಹಾಗೂ ಇತರ ಆಸ್ತಿಗಳು ಇರುವುದಿಲ್ಲ ಎಂದರೆ ನಿಜ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಪ್ರತಿವಾದಿಗಳ ಮೂಲ ಪುರುಷ ಭರಮಪ್ಪ ಹಾಗೂ ಆತನ ಮಕ್ಕಳು ಹಾಗೂ ಮೊಮ್ಮಕ್ಕಳ ಆಸ್ತಿಗಳ ಕುರಿತು ಹೇಳಿ ಬರೆಸಿರುತ್ತೇನೆ.

2. ನನಗೆ ಭರಮಪ್ಪ ಹಾಗೂ ಆತನ ವಾರಸುದಾರರ ಬಗ್ಗೆ ಮಾಹಿತಿ ಇದೆಯಾ ಎಂದರೆ ಇದೆ. ಭರಮಪ್ಪನ ತಂದೆ ಹೆಸರು ಎನು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಭರಮಪ್ಪನ ತಾಯಿ ಹೆಸರು ಎನು ಎಂದರೆ ನನಗೆ ಗೊತ್ತಿಲ್ಲ. ಭರಮಪ್ಪನ ಹೆಂಡತಿಯ ಹೆಸರು ಎನು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಭರಮಪ್ಪ ಯಾವಾಗ ಮೃತಪಟ್ಟ ಎಂದು ನನಗೆ ಗೊತ್ತಿಲ್ಲ. ಭರಮಪ್ಪನ ಘರಾಣೆಯಲ್ಲಿ ಎಷ್ಟು ಆಸ್ತಿಗಳು ಇವೆ ಎಂದರೆ ಗೊತ್ತು. ಕರೂರು ಗ್ರಾಮದಲ್ಲಿ ಭರಮಪ್ಪ ಹಾಗೂ ಅವರ ಕುಟುಂಬದವರಿಗೆ 4-5 ಸರ್ವೆ ನಂಬರಿನ ಆಸ್ತಿಗಳು ಇವೆ. ಆ ಆಸ್ತಿಗಳ ಸರ್ವೆ ನಂಬರು ಎನು ಎಂದರೆ ಕರೂರು ಗ್ರಾಮದ ಸರ್ವೆ ನಂ.80,81,99,95,96 ಆಸ್ತಿಗಳು ಇರುತ್ತವೆ. ಪಂಚಾಯಿತಿಗಳು ಆಸ್ತಿ ಇದೆ ಎಂದರೆ ಒಂದು ಮನೆ ಮತ್ತು ಒಂದು ಕಣ ಇದೆ. ಅವುಗಳ ನಂಬರು ಗೊತ್ತಿದೆಯಾ ಎಂದರೆ ಇಲ್ಲ. ಪಂಚಾಯಿತಿ ಆಸ್ತಿಗಳಿಗೆ ಸಂಬಂದಿಸಿದಂತೆ ದಾಖಲೆಗಳನ್ನು ನೋಡಿದ್ದೀರಾ ಎಂದರೆ ನೋಡಿರುತ್ತೇನೆ.

3. ಪಂಚಾಯಿತಿ ಆಸ್ತಿಗಳು ಯಾರ ಹೆಸರಿನಲ್ಲಿ ಇವೆ ಎಂದು ಗೊತ್ತಿದೆಯಾ ಎಂದರೆ ನಿಂಗಪ್ಪ, ಈರಾಚಾರಿ, ಮನುವಾಚಾರಿ ರವರ ಹೆಸರಿನಲ್ಲಿ ಇವೆ. ಅವರ ಹೆಸರಿನಲ್ಲಿರುವ ಯಾವ

ವರ್ಷದ ದಾಖಲೆಗಳನ್ನು ನೋಡಿದ್ದೀರಾ ಎಂದರೆ ಸುಮಾರು 15 ವರ್ಷಗಳ ದಾಖಲೆಗಳನ್ನು ನೋಡಿರುತ್ತೇನೆ. ನಿಂಗಪ್ಪ, ಈರಾಚಾರಿ, ಮನುವಾಚಾರಿ ಇವರು ಭರಮಪ್ಪನಿಗೆ ಏನು ಆಗಬೇಕು ಎಂದರೆ ಆತನ ಮೊಮ್ಮಕ್ಕಳು ಆಗಬೇಕು. ಭರಮಪ್ಪನಿಗೆ ಒಟ್ಟು ಎಷ್ಟು ಜನ ಮಕ್ಕಳು ಎಂದರೆ 3 ಜನ ಮಕ್ಕಳು. ಅವರು ಯಾರು ಯಾರು ಎಂದರೆ 1 ನೇ ಕಾಳಾಚಾರಿ, 2 ನೇ ಮಲ್ಲಪ್ಪ, 3 ನೇ ನಾಗಪ್ಪ ಎಂದು ಹೇಳುತ್ತಾರೆ. ಭರಮಪ್ಪನಿಗೆ ಕಾಳಾಚಾರಿ ಎಂಬ ಮೊದಲನೇ ಮಗ ಇದ್ದ ಎಂದು ದಾಖಲೆಗಳನ್ನು ನೋಡಿದ್ದೀರಾ ಎಂದರೆ ಇಲ್ಲ. ಕರೂರು ಗ್ರಾಮದಲ್ಲಿ ಭರಮಪ್ಪನಿಗೆ ಮೊದಲನೇಯ ಮಗ ಕಾಳಾಚಾರಿ ಇದ್ದ ಎಂದು ಅವನನ್ನು ನೋಡಿದ್ದೀರಾ ಎಂದರೆ ಇಲ್ಲ. ಆದರೆ ಜನ ಮಾತನಾಡುತ್ತಾರೆ. ಭರಮಪ್ಪನಿಗೆ ಕಾಳಾಚಾರಿ ಎಂಬ ಮಗನಿದ್ದ ಎಂದು ನನ್ನ ಮುಂದೆ ಜನ ಹೇಳಿದ್ದಾರೆಯೇ ಎಂದರೆ ಇಲ್ಲ.

4. ಕಾಳಾಚಾರಿಗೆ ಹೆಂಡತಿ ಇದ್ದ ಬಗ್ಗೆ ಗೊತ್ತಿದೆಯಾ ಎಂದರೆ ಇಲ್ಲ. ಸಾಕ್ಷಿಯೂ ಮುಂದುವರೆದು ಕಾಳಾಚಾರಿ ಮದುವೆ ಆಗಿದ್ದನು. ಆತನ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ಕಾಳಾಚಾರಿಯ ಹೆಂಡತಿಯ ಹೆಸರು ಏನು ಎಂದು ಕೇಳಿದಾಗ ಕಾಳಮ್ಮ ಎಂದು ಹೇಳುತ್ತಾರೆ. ಕಾಳಾಚಾರಿ ಹಾಗೂ ಕಾಳಮ್ಮ ಇಬ್ಬರು ಮದುವೆಯಾಗಿದ್ದ ಬಗ್ಗೆ ದಾಖಲೆಗಳನ್ನು ನೋಡಿದ್ದೀರಾ ಎಂದರೆ ಇಲ್ಲ. ಕಾಳಾಚಾರಿ ಮತ್ತು ಕಾಳಮ್ಮ ಇವರ ಮಗಳು ತುಂಗಮ್ಮ ರವರನ್ನು ನೋಡಿದ್ದೀರಾ ಎಂದರೆ ನೋಡಿದ್ದೇನೆ. ತುಂಗಮ್ಮ ಬದುಕಿದ್ದಾರೆಯೇ ಎಂದರೆ 2000 ನೇ ಇಸವಿಯಲ್ಲಿ ಮೃತಪಟ್ಟಿರುತ್ತಾಳೆ. ತುಂಗಮ್ಮ ಬದುಕಿದ್ದಾಗ ಆಕೆಯು ಕರೂರು ಗ್ರಾಮದಲ್ಲಿ ವಾಸವಾಗಿದ್ದಳು ಎಂದರೆ ನಿಜ. ತುಂಗಮ್ಮ ಯಾರ ಮನೆಯಲ್ಲಿ ವಾಸವಾಗಿದ್ದರು ಎಂದರೆ ಜಕಣಾಚಾರಿಯ ಮನೆಯ ಪಕ್ಕದಲ್ಲಿ ಒಂದು ಜೋಪಡಿ ಕಟ್ಟಿಕೊಂಡು ವಾಸ ಮಾಡುತ್ತಿದ್ದಳು.

5. ಜಕಣಾಚಾರಿ ಪ್ರತಿವಾದಿಗಳ ಮೂಲ ಪುರುಷ ಭರಮಪ್ಪನಿಗೆ ಸಂಬಂದ ಇತ್ತಾ ಎಂದರೆ ಇಲ್ಲ ಅವರು ಒಂದೇ ಜನಾಂಗದವರು ಆಗಿದ್ದರು. ಕರೂರಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ ಸುಮಾರು 50 ವರ್ಷಗಳಿಂದಲೂ ಹಿಂದಿನಿಂದಲೂ ಇದೆ ಎಂದರೆ ನಿಜ. ತುಂಗಮ್ಮ ಶಾಲೆಗೆ ಹೋಗುತ್ತಿದ್ದಳು ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ತುಂಗಮ್ಮ ಕಾಳಾಚಾರಿ ಹಾಗೂ ಕಾಳಮ್ಮ ರವರ ಮಗಳು ಎಂದು ತೋರಿಸಲು ಯಾವುದಾದರೂ ದಾಖಲೆಯನ್ನು ನೋಡಿದ್ದೀರಾ ಎಂದರೆ ಇಲ್ಲ. ನನಗೆ ತಿಳಿದ ಮಟ್ಟಿಗೆ ತುಂಗಮ್ಮ ಪ್ರಾಪ್ತ ವಯಸ್ಸಿಗೆ ಬಂದ ನಂತರ ಕರೂರು ಗ್ರಾಮದಲ್ಲಿ ವಾಸವಾಗಿದ್ದು ಚುನಾವಣೆಯಲ್ಲಿ ಮತದಾನ ಮಾಡಿರುತ್ತಾರೆ ಎಂದು ಹೇಳುತ್ತಾರೆ. ವಾದಿಯರು ನನಗೆ ಹೇಗ ಪರಿಚಯ ಎಂದರೆ ಕರೂರು ಗ್ರಾಮದಲ್ಲಿ ವಾಸವಾಗಿರುವ ಕಾರಣ ಪರಿಚಯವಾಗಿದ್ದಾರೆ.

6. ದಾವಾ ಆಸ್ತಿಗಳು ಇವಾಗ ಯಾರ ಹೆಸರಿನಲ್ಲಿವೆ ಎಂದರೆ ಮೂಲಪುರುಷ ಭರಮಪ್ಪನ ಮೊಮ್ಮಕ್ಕಳಾದ ನಿಂಗಪ್ಪ, ಈರಾಚಾರಿ ಹಾಗೂ ಮನುವಾಚಾರಿ ರವರ ಖಾತೆದಾರರ ಹೆಸರಿನಲ್ಲಿವೆ ಹಾಗೂ ನಾಗಪ್ಪನ ಮಗ ಭರಮಪ್ಪ ರವರ ಹೆಸರಿನಲ್ಲಿ ಖಾತೆಗಳು ದಾಖಲಾಗಿರುತ್ತವೆ. ನನಗೆ ಯಾವ ಕಾಲದಲ್ಲಿ ಖಾತೆಯಾಗಿದೆ ಎಂದು ನನಗೆ ಸರಿಯಾಗಿ ಗೊತ್ತಿಲ್ಲ. ಈ ದಾವೆಯನ್ನು ದಾಖಲು ಮಾಡಲು ವಾದಿ ಕಮಲಮ್ಮ ಹಾಗೂ ಇತರರಿಗೆ ನಾನೇ ಸಹಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ ಪಿ -15 ರಿಂದ ನಿ ಪಿ -34 ದಾಖಲೆಗಳನ್ನು ವಾದಿಯರಿಗೆ ನಾನೇ ತೆಗೆದುಕೊಟ್ಟಿರುತ್ತೇನೆ ಅವುಗಳನ್ನು ನಾನೇ ಅರ್ಜಿ ಸಲ್ಲಿಸಿ ಪಡೆದುಕೊಂಡು ವಾದಿಯರಿಗೆ ಕೊಟ್ಟಿರುತ್ತೇನೆ ಎಂದರೆ ನಿಜ. ವಾದಿಯರಿಗೂ ಹಾಗೂ ಮೂಲ ಪುರುಷ ಭರಮಪ್ಪನಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಪಡೆದು ಕೊಟ್ಟಿರುತ್ತೇನೆ ಎಂದರೆ ಇರುವ ದಾಖಲೆಗಳನ್ನು ಪಡೆದುಕೊಟ್ಟಿರುತ್ತೇನೆ.

7. ವಾದಿಯರು ಮೂಲ ಪುರುಷ ಭರಮಪ್ಪನಿಗೆ ಸಂಬಂದಪಟ್ಟ ದಾವಾ ಆಸ್ತಿಗಳಲ್ಲಿ ಸಾಗುವಳಿ ಮಾಡುವುದನ್ನು ಹಾಗೂ ಸ್ವಾಧೀನಾನುಭವದಲ್ಲಿ ಇರುವುದನ್ನು ನೋಡಿದ್ದೀರಾ ಎಂದರೆ ಇಲ್ಲ. ಗುಡ್ಡಾಚಾರಿ ತುಂಗಮ್ಮನಿಗೆ ಎನಾಗಬೇಕು ಎಂದರೆ ಮಗ. ಗುಡ್ಡಾಚಾರಿಯ ಹೆಂಡತಿ ಹೆಸರು ಎಂದರೆ ಕಮಲಮ್ಮ. ಕಮಲಮ್ಮ ಈರಾಚಾರಿಯ ಮಗಳು ಎಂದರೆ ನಿಜ. ಈರಾಚಾರಿಯೂ ಮೂಲ ಪುರುಷ ಭರಮಪ್ಪನ ಮೊಮ್ಮಗ ಎಂದರೆ ನಿಜ. ಕಮಲಮ್ಮ ಮೂಲ ಪುರುಷ ಭರಮಪ್ಪನಿಗೆ ಎನಾಗುತ್ತಾಳೆ ಎಂದರೆ ಮೊಮ್ಮಗಳು ಆಗುತ್ತಾಳೆ. ನನಗೆ ಮೂಲ ಪುರುಷ ಭರಮಪ್ಪನ ಘರಾಣೆಯ ಬಗ್ಗೆ ನನಗೆ ಎನೂ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ವಾದಿಯರಿಗೆ ಆಸೆ ಹುಟ್ಟಿಸಿ ಈ ದಾವೆಯನ್ನು ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ ಬಿ.ಜಿ.ಆರ್ ವಕೀಲರಿಂದಃ</u>**

ಪ್ರತಿವಾದಿ 4 ಎ ದಿಂದ ಎಫ್ ಮತ್ತು 5 ನೇ ಪ್ರತಿವಾದಿಯ ಪರ ಶ್ರೀ ಎಸ್ ಎ ಕೆ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದಾರೆ.

**<u>ಪಾಟೀ ಸವಾಲುಃ 21 ನೇ ಪ್ರತಿವಾದಿಗಳ ಪರ ಶ್ರೀ ಯು.ಟಿ.ಬಿ. ವಕೀಲರಿಂದಃ</u>**

ಪ್ರತಿವಾದಿ 4 ಎ ದಿಂದ ಎಫ್ ಮತ್ತು 5 ನೇ ಪ್ರತಿವಾದಿಯ ಪರ ಶ್ರೀ ಎಸ್ ಎ ಕೆ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದಾರೆ.

**<u>ಉಳಿದ ಪ್ರತಿವಾದಿಗಳು ಹಾಗೂ ಅವರ ವಕೀಲರನ್ನು ಕರೆಸಲಾಯಿತು. ಗೈರು ಹಾಜರಿರುತ್ತಾರೆ.</u>**

**<u>ಆದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.</u>**

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

(ಬಿ.ಸಿದ್ದರಾಜು)

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.